ನಿಯಮ-330
ಕ್ರ-44
ಕಾರ್ಮಿಕ ಇಲಾಖೆ

**ಕರ್ನಾಟಕ ವಿಧಾನ ಪರಿಷತ್ತು**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ಇವರಿಂದ ನಿಯಮ-330 ರಡಿಯಲ್ಲಿ ನೀಡಲಾದ ಸೂಚನಾ ಪತ್ರಕ್ಕೆ ಉತ್ತರ**

**ನಿಯಮ-330ರಡಿಯಲ್ಲಿ ನೀಡಲಾದ ಸೂಚನಾ ಪತ್ರ:-**

ಕಾರ್ಮಿಕ ಇಲಾಖೆಯ ವ್ಯಾಪ್ತಿಗೆ ಬರುವ ರಾಜ್ಯದಲ್ಲಿ 07 ಇ.ಎಸ್.ಐ. ಆಸ್ಪತ್ರೆಗಳು ಮತ್ತು 114 ಇ.ಎಸ್.ಐ.ಚಿಕಿತ್ಸಾಲಯಗಳಿವೆ (ಡಿಸ್ಪೆನ್ಸರಿ) ಇವುಗಳಿಗೆ ಸುಮಾರು 500 ಕ್ಕೂ ಹೆಚ್ಚಿನ ಔಷಧಿಗಳನ್ನು ಖರೀದಿಸಿ ಸರಬರಾಜು ಮಾಡಲಾಗುತ್ತದೆ. ಆತಂಕಕಾರಿ ವಿಷಯವೇನೆಂದರೆ, ಕಳೆದ 17 – 18 ತಿಂಗಳಿಂದ ಔಷದಿಗಳ ಖರೀದಿ ಪ್ರಕ್ರಿಯೆ ನಡೆದೇಯಿಲ್ಲ. ಕಳೆದ 2 ವರ್ಷದಲ್ಲಿ ಕೊರೋನ ಸೃಷ್ಠಿಸಿರುವ ತಲ್ಲಣದಿಂದ ಆರೋಗ್ಯ ಕ್ಷೇತ್ರವನ್ನೇ ಜಗಜ್ಜಾಹೀರವಾಗಿದೆ. ಇಂತಹದಲ್ಲಿ ರೋಗಿಗಳ ಪಾಡೇನು. ಇಂತಹ ಆಘಾತ ವಿಷಯದಿಂದ ಯಾವುದೇ ಸರ್ಕಾರಕ್ಕೆ ಶೋಭೆ ತರುವಂತದ್ದಲ್ಲ ಸರ್ಕಾರಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ. ರಾಜ್ಯದಲ್ಲಿ 48.75 ಲಕ್ಷ ಇ.ಎಸ್.ಐ. ಕಾರ್ಡುದಾರರಿದ್ದಾರೆ. 07 ಆಸ್ಪತ್ರೆಗಳು, 114 ಚಿಕಿತ್ಸಾಲಯಗಳ ಜೊತೆಗೆ ಕೇಂದ್ರ ಸರ್ಕಾರದ ಇ.ಎಸ್.ಐ.ನಿಗಮದ ನಿಯಂತ್ರಣದಲ್ಲಿರುವ 03 ಆಸ್ಪತ್ರೆಗಲ್ಲಿ ಚಿಕಿತ್ಸೆಗೆ ಅವಕಾಶವಿದೆ. ರೋಗಿಗಳಿಗೆ ಉಚಿತವಾಗಿ ವಿತರಿಸುವ ಔಷಧಿಗಳಿಗೆ ತಗಲುವ ಒಟ್ಟು ವೆಚ್ಚದಲ್ಲಿ ಶೇಕಡಾ 85 ರಷ್ಟನ್ನು ಕೇಂದ್ರ ಸರ್ಕಾರ ಹಾಗೂ ಶೇಕಡಾ 15 ರಷ್ಟನ್ನು ರಾಜ್ಯ ಸರ್ಕಾರ ಭರಿಸುತ್ತದೆ. ಅಗತ್ಯವಾದ ಔಷಧಿಗಳನ್ನು 06 ತಿಂಗಳಿಗೊಮ್ಮೆ ಖರೀದಿ ಮಾಡಬೇಕೆಂದು ನಿಯಮವಿದ್ದರೂ ಸಹ ಸರಿಸುಮಾರು ಕಳೆದ 02 ವರ್ಷಗಳಿಂದ ಔಷಧಿಯನ್ನೇ ಖರೀದಿ ಮಾಡಿಲ್ಲ. ಈ ಸಮಸ್ಯೆಗೆ ಮುಖ್ಯ ಕಾರಣವೇನೆಂದರೆ ಕೆಲವು ಚಿಕಿತ್ಸಾಲಯಗಳು ಆಸ್ಪತ್ರೆಗಳಿಂದ ಅಸಹಜ ಪ್ರಮಾಣದಲ್ಲಿ ಔಷಧಿ ಬೇಡಿಕೆ ಪ್ರಸ್ತಾವ ಸಲ್ಲಿಸಿರುವ ಆರೋಪವಿದೆ. ಈ ಬಗ್ಗೆ ಸಂಬಂಧಿಸಿದವರ ಮೇಲೆ ಇನ್ನು ತನಿಖೆಯಾಗಿಲ್ಲ. ತನಿಖೆಯಾಗಿದ್ದರೂ ಸಹಾ ಸಂಬಂಧಿಸಿದವರ ಮೇಲೆ ಕಾನೂನಿನ ಕುಣಿಕೆಯನ್ನು ಹಾಕಿ ಎಳೆಯುವುದರ ಬದಲು ತಪ್ಪಿತಸ್ಥರ ಪರವಾಗಿ ಕೈಜೋಡಿಸಿ ಅವರನ್ನು ಸೇಫ್ ಮಾಡಲು ಸರ್ಕಾರ ಮುಂದಾಗಿದೆ. ಕೆಲವು ವರ್ಷಗಳಿಂದೀಚೆಗೆ ಇ.ಎಸ್.ಐ. ಆಸ್ಪತ್ರೆಗಳನ್ನು ಜನಸ್ನೇಹಿಯಾಗಿ ಮಾಡುವುದರ ಜೊತೆಗೆ ಅತಿ ಹೆಚ್ಚು ಪಾರದರ್ಶಕವಾಗಿಯೂ ಇರುವಂತೆ ನೋಡಿಕೊಳ್ಳಲಾಗಿದೆ. ಖಾಸಗಿ ಆಸ್ಪತ್ರೆಗಳಿಗಿಂತ ಹೆಚ್ಚು ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ. ಆದರೆ “ಎಲ್ಲಾ ಬಣ್ಣವನ್ನು ಮಸಿ ನುಂಗಿತು” ಎನ್ನುವ ಹಾಗೆ ಅಗತ್ಯ ಔಷಧಗಳ ಕೊರತೆಯಿಂದಾಗಿ ರೋಗಿಗಳು ಇ.ಎಸ್.ಐ. ಆಸ್ಪತ್ರೆಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸರ್ಕಾರ ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡು ಔಷಧಿ ಖರೀದಿಯನ್ನು ಕಾಲಮಿತಿಯೊಳಗೆ ಖರೀದಿಸಿ ವಿತರಿಸಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಹಾಗೂ ಇಡೀ ವ್ಯವಸ್ಥೆಯಲ್ಲೇ ತಪ್ಪುಗಳಿದ್ದರೆ ಅವುಗಳನ್ನು ಸರಿಪಡಿಸಲು ಸರ್ಕಾರ ಕ್ರಮ ವಹಿಸಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳೂ ಈ ವಿಷಯ ಕುರಿತು ಹೆಚ್ಚಿನ ಮುತುವರ್ಜಿ ವಹಿಸುವುದು ಅಗತ್ಯವಾಗಿದೆ. ಇಲ್ಲದಿದ್ದರೆ ರೋಗಿಗಳಿಗೆ ಅಗತ್ಯ ಔಷಧಗಳು ಸಿಗದೇ ಇನ್ನು ಹೆಚ್ಚಿನ ದುರಂತಗಳು ಸಂಭವಿಸುವ ಸಾಧ್ಯತೆಗಳಿವೆ ಕೋರುತ್ತಾ, ಈ ಹಿನ್ನೆಲೆಯಲ್ಲಿ ಇಂತಹ ಮಹತ್ವದ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

**ಉತ್ತರ:**

ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಅಗತ್ಯವಿರುವ ಔಷಧಿಗಳನ್ನು ಇ.ಎಸ್.ಐ.ಸಿ ಕೇಂದ್ರ ಕಛೇರಿ ನವದೆಹಲಿ ಇವರು ನಿಗಧಿ ಪಡಿಸುವ ದರಗುತ್ತಿಗೆ ನಿಯಮಾವಳಿ ಅನುಸಾರ ಮತ್ತು K.T.P.P. Act ನಡಿಯಲ್ಲಿ ಸಂಗ್ರಹಣೆ ( Procurement) ಮಾಡಲಾಗುತ್ತದೆ.

ಕಾ.ರಾ.ವಿ. ಯೋಜನೆ ವೈದ್ಯಕೀಯ ಸೇವೆಗಳ ಇಲಾಖೆಯಲ್ಲಿ ಪ್ರಸ್ತುತ 07 ಕಾ.ರಾ.ವಿ. ಆಸ್ಪತ್ರೆ ಮತ್ತು 113 ಕಾರಾವಿ. ಚಿಕಿತ್ಸಾಲಯಗಳು ಮತ್ತು 01 ರೋಗ ಪತ್ತೆ ಹಚ್ಚುವ ಕೇಂದ್ರ ಕಾರ್ಯ ನಿರ್ವಹಿಸುತ್ತಿದ್ದು, ಈ ಎಲ್ಲಾ ಕಾ.ರಾ.ವಿ. ಆಸ್ಪತ್ರೆ ಮತ್ತು ಕಾರಾವಿ. ಚಿಕಿತ್ಸಾಲಯಗಳಿಗೆ 08 ಪ್ರಾಂತೀಯ ಔಷಧಿ ಉಗ್ರಾಣಗಳ ಮೂಲಕ ಕಾಲಕಾಲಕ್ಕೆ ಔಷಧಿಗಳನ್ನು ಸರಬರಾಜು ಮಾಡಲಾಗುತ್ತಿದೆ.

ಕಳೆದ 02 ವರ್ಷಗಳಲ್ಲಿ ಕೋವಿಡ್-19 ರ ಮಹಾ ಮಾರಿ ಸಂದರ್ಭದಲ್ಲಿ ಈ ಎಲ್ಲಾ ಕಾ.ರಾ.ವಿ. ಆಸ್ಪತ್ರೆ ಮತ್ತು ಕಾರಾವಿ. ಚಿಕಿತ್ಸಾಲಯಗಳಿಗೆ ಕೋವಿಡ್-19 ಮಹಾಮಾರಿಯ ಚಿಕಿತ್ಸೆಗಾಗಿ ಬೇಕಾಗಿರುವ ಎಲ್ಲಾ ಔಷಧಿಗಳನ್ನು Procure ಮಾಡಿ ಸರಬರಾಜು ಮಾಡಲಾಗಿರುತ್ತದೆ. ಮತ್ತು ಯಾವುದೇ ಔಷಧಿಗಳು ಕೊರತೆ ಇಲ್ಲದೇ ನಿಭಾಯಿಸಲಾಗಿರುತ್ತದೆ.

2020-21 ರಲ್ಲಿ ಸ್ವೀಕರಿಸಿದ ಬೇಡಿಕೆಯನ್ನು ಕ್ರೂಢೀಕರಿಸಿ ಬೇಡಿಕೆಗಿಂತ ಶೇಕಡಾ 30 ಕ್ಕಿಂತ ಹೆಚ್ಚಿನ ಔಷಧಿಗಳನ್ನು ಸಂಗ್ರಹಿಸಿ ದಾಸ್ತಾನು ಮಾಡಲಾಗಿತ್ತು. ಹಾಗು 2020-21 ರಲ್ಲಿ ಎಲ್ಲಾ ಕಾರಾವಿ. ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಂದ ಸ್ವೀಕರಿಸಿದ ಬೇಡಿಕೆಗಿಂತ ಶೇಕಡಾ 20 ರಷ್ಟು ಹೆಚ್ಚಿನ ಪ್ರಮಾಣದ ಔಷಧಿಗಳನ್ನು ಕೋವಿಡ್ ಮಹಾಮಾರಿಯ ಹಿನ್ನೆಲೆಯಲ್ಲಿ Buffer Stock ಎಂದು ಸಂಗ್ರಹಣೆ ಮಾಡಿ ದಾಸ್ತಾನು ಮಾಡಲಾಗಿತ್ತು.

2020-21 ನೇ ಸಾಲಿನಲ್ಲಿ ಸುಮಾರು ರೂ.72.00 ಕೋಟಿಯಷ್ಟು ಮತ್ತು 2021-22 ನೇ ಸಾಲಿನಲ್ಲಿ ಸುಮಾರು ರೂ.75.00 ಕೋಟಿಗಳಷ್ಟು ಔಷಧಿಗಳನ್ನು ಖರೀದಿ ಮಾಡಿ ಸರಬರಾಜು ಮಾಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಕಳೆದ ಎರಡು ಸಾಲಿನಲ್ಲಿ ಕಾರಾವಿ. ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಯಾವುದೇ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಮುಂದುವರೆದಂತೆ, ತುರ್ತು ಪರಿಸ್ಥಿತಿಯಲ್ಲಿ ಔಷಧಿಗಳನ್ನು ಖರೀದಿಸಲು ಆಯಾ ಕಾರಾವಿ. ಆಸ್ಪತ್ರೆಗಳ ವೈದ್ಯಕೀಯ ಅಧೀಕ್ಷಕರುಗಳಿಗೆ ರೂ.1.00 ಲಕ್ಷಗಳವರೆಗಿನ ಔಷಧಿಗಳನ್ನು ತಮ್ಮ ಹಂತದಲ್ಲಿಯೇ ಖರೀದಿ ಮಾಡಲು ಅಧಿಕಾರ ವಿಕೇಂದ್ರೀಕರಣ ಮಾಡಲಾಗಿರುತ್ತದೆ.

ಇದಕ್ಕೂ ಮೀರಿ ವಿಮಾರೋಗಿಗಳಿಗೆ ಔಷಧಿಗಳ ಅವಶ್ಯಕತೆ ಕಂಡುಬಂದಲ್ಲಿ ಅವುಗಳನ್ನು ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಿ ವೈದ್ಯಕೀಯ ವೆಚ್ಚ ಮರುಪಾವತಿಗೆ ಅವಕಾಶ ಒದಗಿಸಲಾಗಿರುತ್ತದೆ. ಪ್ರಸಕ್ತ ವರ್ಷ ಮೇ ತಿಂಗಳಿನಲ್ಲಿ ಎಲ್ಲಾ ಕಾರಾವಿ. ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ 06 ತಿಂಗಳ ಅವಧಿಗೆ ವಿಮಾರೋಗಿಗಳಿಗೆ ಬೇಕಾಗಿರುವ ಔಷಧಿಗಳ ಬೇಡಿಕೆಯನ್ನು ಕೋರಲಾಗಿತ್ತು. ಈ ಸಂಬಂಧ ಕೆಲವು ಆಸ್ಪತ್ರೆ / ಚಿಕಿತ್ಸಾಲಯಗಳಿಂದ ಅಸಹಜ ಪ್ರಮಾಣದಲ್ಲಿ ಬೇಡಿಕೆ ಬಂದಿದ್ದರಿಂದ ಅದರ ಬಗ್ಗೆ ವಿವರಣೆ ಕೋರಲಾಗಿತ್ತು. ಕಾರ್ಮಿಕರ ರಾಜ್ಯ ವಿಮಾ ಇಲಾಖೆ ನಿರ್ದೇಶನಾಲಯದಲ್ಲಿ ಸ್ವೀಕರಿಸಿದ ವಿವರಣೆಯನ್ನು ಪರಿಶೀಲಿಸಿ ಸುಮಾರು ರೂ.57.00 ಕೋಟಿ ಮೌಲ್ಯದ ಔಷಧಿಗಳಿಗೆ ಖರೀದಿ ಆದೇಶವನ್ನು ಜುಲೈ 2022 ರಲ್ಲಿ ಹೊರಡಿಸಲಾಗಿರುತ್ತದೆ.

ಇದರಲ್ಲಿ, ಬಹುಪಾಲು ಔಷಧಿಗಳು ಶೇಕಡಾ 75 ರಷ್ಟು ಸರಬರಾಜಾಗಿದ್ದು ವಿಮಾರೋಗಿಗಳಿಗೆ ವಿತರಣೆಯಾಗಿರುತ್ತದೆ. ಇದಲ್ಲದೇ ಆದ್ಯತೆಯ ಮೇರೆಗೆ ಉತ್ಕೃಷ್ಟ ಔಷಧಿಗಳನ್ನು (Super Speciality Drugs) ಸಹಾ ಕಾಲಕಾಲಕ್ಕೆ ವಿಮಾರೋಗಿಗಳ ಅವಶ್ಯಕತೆಗೆ ಅನುಗುಣವಾಗಿ ಸಂಗ್ರಹಿಸಿ ಸರಬರಾಜು ಮಾಡಲಾಗುತ್ತಿದೆ. ಇದಲ್ಲದೇ ವಿವಿಧ ಆಸ್ಪತ್ರೆಗಳ ಉನ್ನತೀಕರಣಕ್ಕಾಗಿ ರೂ.44.00 ಕೋಟಿಗಳ ಮಂಜೂರಾತಿಯನ್ನು ಕಾರಾವಿ. ನಿಗಮ, ನವದೆಹಲಿ ಇವರಿಂದ ಪಡೆದು ಖರೀದಿಗೆ ಕ್ರಮ ವಹಿಸಲಾಗುತ್ತಿದೆ.

ಸುಮಾರು ರೂ.57.00 ಕೋಟಿ ಮೌಲ್ಯದ ಔಷಧಿಗಳಿಗೆ ಖರೀದಿ ಆದೇಶವನ್ನು ಜುಲೈ 2022 ರಲ್ಲಿ ಹೊರಡಿಸಿ ಸರಬರಾಜಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ಕಾರಾವಿ. ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಲ್ಲಿ ಅಗತ್ಯ ಔಷಧಿಗಳ ಕೊರತೆ ಇರುವುದಿಲ್ಲ.

**ಸಂಖ್ಯೆ: ಕಾಇ 256 ಎಲ್‌ಎಸ್ ಐ 2022**

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು